**ಅತಿ ಜರೂರು**

ಕರ್ನಾಟಕ ಸರ್ಕಾರ

## ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ಮಾತಂವಿ/24/ಡಿಎಲ್ಎಂ/2020-21 ದಿನಾಂಕ:09-02-2021

### ಸುತ್ತೋಲೆ

**ವಿಷಯ:** ಕರ್ನಾಟಕ LMS ಡಿಜಿಟಲ್ ಕಲಿಕೆ ಯೋಜನೆಯ ಅನುಷ್ಠಾನಕ್ಕಾಗಿ ಎಲ್ಲ ವಿಷಯಗಳಲ್ಲಿ ವಿವಿಧ ಸೆಮೆಸ್ಟರ್‌ಗಳಿಗೆ ಸಂಬಂಧಪಟ್ಟ ಇ-ಕಂಟೆಂಟ್ ಅನ್ನು ಸಿದ್ಧಪಡಿಸಿ ದಿ:20-02-2021ರೊಳಗೆ ಕಡ್ಡಾಯವಾಗಿ ಅಪ್ ಲೋಡ್ ಮಾಡಲು ಸೂಚನೆ.

****

ಕರ್ನಾಟಕ ಎಲ್.ಎಂ.ಎಸ್ ಡಿಜಿಟಲ್ ಕಲಿಕೆ ಯೋಜನೆ ದಿನಾಂಕ: 30-11-2020 ರಂದು ಉದ್ಘಾಟನೆಯಾಗಿದ್ದು, 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಲಾಗಿನ್ ಹಾಗೂ 466 ಮಾಡರೇಟರ್‌ಗಳಿಗೆ ಕಂಟೆಂಟ್ ಅಪ್‌ಲೋಡ್ ಮಾಡಲು ಲಾಗಿನ್ ವ್ಯವಸ್ಥೆಯನ್ನು ಈಗಾಗಲೇ ಒದಗಿಸಲಾಗಿದೆ.

2020-21ನೇ ಶೈಕ್ಷಣಿಕ ವರ್ಷದಲ್ಲಿ ವಿವಿಧ ವಿಶ್ವವಿದ್ಯಾಲಯಗಳಡಿ ಪದವಿ ತರಗತಿಗಳ 1, 3 ಮತ್ತು 5ನೇ ಸೆಮಿಸ್ಟರ್ ಗಳು ಶೀಘ್ರದಲ್ಲೇ ಕೊನೆಗೊಳ್ಳುತ್ತಿದ್ದು, ವಿದ್ಯಾರ್ಥಿಗಳು ಪರೀಕ್ಷಾ ಸಿದ್ಧತೆಯನ್ನು ಸಮರ್ಪಕವಾಗಿ ಮಾಡಿಕೊಳ್ಳಲು ಸಾಧ್ಯವಾಗುವಂತೆ ಪಠ್ಯಕ್ರಮಕ್ಕೆ ಅನುಗುಣವಾದ ಇ-ಕಂಟೆಂಟ್ ಅನ್ನು ಕರ್ನಾಟಕ LMS ವೇದಿಕೆಯಲ್ಲಿ ಸಮಗ್ರ ರೂಪದಲ್ಲಿ ಕೂಡಲೇ ಒದಗಿಸಬೇಕಾಗಿರುತ್ತದೆ. ವಿಷಯದ ಗಂಭೀರತೆಯನ್ನು ಪರಿಗಣಿಸಿ, ವಿಷಯವಾರು ಮಾಡರೇಟರ್‌ಗಳಿಗೆ ವಿವಿಧ ವಿಷಯಗಳಲ್ಲಿ ಕೋರ್ಸ್ ಪ್ಲಾನ್‌ನಲ್ಲಿ ನಮೂದಿಸಿರುವ ಸೆಷನ್‌ಗಳಿಗೆ ಅನುಗುಣವಾಗಿ ಪಿಪಿಟಿ, ಸ್ಟಡಿ ಮೆಟೀರಿಯಲ್ ಹಾಗೂ ವಿಡಿಯೋಗಳನ್ನು ಸಿದ್ಧಪಡಿಸಿ ಕಡ್ಡಾಯವಾಗಿ ಕರ್ನಾಟಕ ಎಲ್.ಎಂ.ಎಸ್‌ಗೆ ಅಪ್‌ಲೋಡ್ ಮಾಡುವಂತೆ ಮತ್ತು ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರು ತಮ್ಮ ಕಾಲೇಜುಗಳ ಇ-ಕಂಟೆಂಟ್ ಸಿದ್ಧತಾ ತಂಡಕ್ಕೆ ಈ ನಿಟ್ಟಿನಲ್ಲಿ ಪೂರ್ಣ ಸಹಕಾರ-ಸೌಲಭ್ಯಗಳನ್ನು ನೀಡುವಂತೆ ಸೂಕ್ತ ಕ್ರಮವಹಿಸಿ, ತಂಡದಲ್ಲಿ ಸದಸ್ಯರ ಕೊರತೆ ಕಂಡುಬಂದರೆ ಹೆಚ್ಚುವರಿಯಾಗಿ ಅತಿಥಿ ಉಪನ್ಯಾಸಕರು

ಹಾಗೂ ಅನುದಾನಿತ ಕಾಲೇಜಿನ ಸಹಾಯಕ/ ಸಹ ಪ್ರಾಧ್ಯಾಪಕರನ್ನೂ ಬಳಸಿಕೊಂಡು ಕಂಟೆಂಟ್ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈಗಾಗಲೇ ಹಲವಾರು ಬಾರಿ ಸೂಚಿಸಲಾಗಿದೆ.

ಪರಿಶೀಲಿಸಲಾಗಿ ಇ-ಕಂಟೆಂಟ್ ಅಭಿವೃದ್ಧಿ, ಅಪ್‌ಲೋಡ್ ಪ್ರಕ್ರಿಯೆಯಲ್ಲಿ ಮಾಡರೇಟರ್ಸ್, ಸಬ್ಜೆಕ್ಟ್ ಎಕ್ಸ್‌ಪರ್ಟ್ಸ್ ಹಾಗೂ ಕಂಟೆಂಟ್ ಡೆವಲಪರ್‌ಗಳನ್ನು ಒಳಗೊಂಡ ತಂಡಗಳು ಸಮಯನುಸಾರವಾಗಿ ಇ-ಕಂಟೆಂಟ್ ಅಪ್‌ಲೋಡ್ ಮಾಡದೇ ಇರುವುದು ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಗಮನಿಸಲಾಗಿದೆ. **ಆದ್ದರಿಂದ ಎಲ್ಲಾ ಮಾಡರೇಟರ್‌ಗಳು ದಿನಾಂಕ: 20.02.2021ರೊಳಗಾಗಿ ಎಲ್ಲಾ ಸೆಷನ್‌ಗಳ ಇ-ಕಂಟೆಂಟ್‌ಗಳನ್ನು (study material, PPT & video) ಕಡ್ಡಾಯವಾಗಿ ಅಪ್‌ಲೋಡ್ ಮಾಡಿ, ತಮ್ಮ ವ್ಯಾಪ್ತಿಯ ಜಂಟಿ ನಿರ್ದೇಶಕರ ಕಛೇರಿಗೆ ವರದಿ ನೀಡಬೇಕಾಗಿ ಆದೇಶಿಸಲಾಗಿದೆ. ಮುಂದುವರೆದು ದಿನಾಂಕ 13.02.2021ರ ಒಳಗಾಗಿ ಪ್ರಾಂಶುಪಾಲರು ಎಲ್ಲಾ ವಿದ್ಯಾರ್ಥಿಗಳು LMSಗೆ ಲಾಗಿನ್ ಆಗಲು ಸೂಕ್ತ ಕ್ರಮವನ್ನು ಕೈಗೊಳ್ಳಲು ಆದೇಶಿಸಲಾಗಿದೆ.**

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ:**

1. ಜಂಟಿ ನಿರ್ದೇಶಕರು ಹಾಗು LMS ಸಮನ್ವಯ ಅಧಿಕಾರಿಗಳು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮಂಗಳೂರು, ಮೈಸೂರು. ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ-ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
2. ಎಲ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ -ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು- ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
4. ಕಛೇರಿ ಪ್ರತಿ.